ಅನುಭವೈಕವೇದ್ಯವೂ, ಸೂಕ್ಷ್ಮಾತಿಸೂಕ್ಷ್ಮವೂ, ನಿಗೂಢವೂ ಆಗಿರುವುದು. ಈ ಆಧ್ಯಾತ್ಮಿಕ ಜಾಗೃತಿ ಉಂಟಾದಾಗಲೇ ಮಾನವನ ಪುನರುದ್ಧಾರ ಸಾಧ್ಯವೆಂಬುದು ವಿವೇಕಾನಂದರ ದೃಷ್ಟಿಯಾಗಿದ್ದಿತು.

ಈ ಆಧ್ಯಾತ್ಮಿಕ ಶಕ್ತಿ ಜಾಗೃತವಾಗಲು ವ್ಯಕ್ತಿಯು ಸತ್ಯನಿಷ್ಠೆ, ಪಾವಿತ್ರ್ಯ, ನಿಸ್ವಾರ್ಥತೆ ಮತ್ತು ಚಾರಿತ್ರ್ಯಶುದ್ಧಿಯ ಕಡೆಗೆ ಗಮನವೀಯುವುದು ಆದ್ಯ ಕರ್ತವ್ಯ. ಇದಕ್ಕೆ ಅವಶ್ಯಕವಾದುದು ನೈತಿಕತೆಯ ಆಚರಣೆ, ಭಾವಶುದ್ಧಿ, ವಾಕ್‌ಶುದ್ಧಿ ಮತ್ತು ಕ್ರಿಯಾಶುದ್ಧಿಯ ಮೂಲಕ ನೈತಿಕತೆಯನ್ನು ರೂಢಿಸಿಕೊಳ್ಳುವುದು. ಈ ನೈತಿಕ ಅನುಷ್ಠಾನವು ಕಷ್ಟಕರವಾದುದಾದರೂ, ಪೂರ್ವಸಿದ್ಧತೆಯೊಂದಿಗೆ ಅಂದರೆ ಪತನಗೊಳ್ಳುವ ಸಂದರ್ಭ ಒದಗಿದಾಗ ತಕ್ಕ ಎಚ್ಚರ ವಹಿಸಿ, ಜನರ ನಡುವೆ ಇದ್ದುಕೊಂಡೇ ಅದಕ್ಕಾಗಿ ಪ್ರಯತ್ನಿಸಬೇಕು. ಆಗಲೇ ಶಕ್ತಿಶಾಲಿ ವ್ಯಕ್ತಿತ್ವದ ನಿರ್ಮಾಣ ಸಾಧ್ಯವಾಗುವುದು. ನೈತಿಕತೆಯು ದೈವದ ಭಯದಿಂದಾಗಲೀ ಅಥವಾ ಕರ್ಮಸಿದ್ಧಾಂತದ ಫಲದಿಂದಾಗಲೀ ಉದ್ಭವಿಸದೆ, ಅಂತರಂಗ ಪರಿಶುದ್ಧತೆ ಮತ್ತು ಆತ್ಮದ ಏಕಸ್ವಾಮ್ಯತೆಯನ್ನೇ ಆಧರಿಸಿರುತ್ತದೆಂಬ ಹೊಸ ನೈತಿಕ ದೃಷ್ಟಿಕೋನವನ್ನು ಸ್ವಾಮಿ ವಿವೇಕಾನಂದರು ಪ್ರತಿಪಾದಿಸುತ್ತಾರೆ.

ವ್ಯಕ್ತಿಯ ಬೆಳವಣಿಗೆ ಅಂತಃಕರಣದ ಜಾಗೃತಿಯಿಂದ ಆರಂಭವಾಗಿ ಅದು ಸಾಮಾಜಿಕ ಕ್ರಿಯೆಯಾಗಿ ಪರಿವರ್ತನೆಗೊಳ್ಳಬೇಕು. ವ್ಯಕ್ತಿಯು ತನ್ನನ್ನು ತಾನು ಯಾವುದೇ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ ಮುನ್ನ ಪ್ರಾಯೋಗಿಕವಾಗಿ ಯೋಚಿಸಿ, ತನ್ನಲ್ಲಿ ಸ್ವಯಂ ಬದಲಾವಣೆ ಕಂಡುಕೊಂಡು, ಕ್ರಮೇಣ ಅದು ಹೆಚ್ಚು ಜನರಿಗೆ ಪಸರಿಸುವಂತೆ ಮಾಡಬೇಕು. ನಮ್ಮಲ್ಲಿನ ದ್ವಂದ್ವಗಳಿಗೆ ಉತ್ತರ ಕಂಡುಕೊಂಡು ನಮ್ಮ ಸುತ್ತಲಿನ ಜನರ ಸಮಸ್ಯೆಗಳಿಗೆ ಪರಿಹಾರ ಹುಡುಕುವುದೇ ಮಾನವನ ಗುರಿಯಾಗಿರಬೇಕೆಂಬುದು ಸ್ವಾಮೀಜಿಯವರ ಸಂದೇಶವಾಗಿದ್ದಿತು.

ಮುಕ್ತಿಯ ಸಾಧನವು ಒಂದು ಕಾಲದಲ್ಲಿ ತಪಸ್ಸು, ವೈರಾಗ್ಯಗಳ ಮೂಲಕ ಸಾಧಿಸಬಹುದಾಗಿದ್ದರೆ, ಮತ್ತೊಂದು ಕಾಲದಲ್ಲಿ ಅದನ್ನು ಭಕ್ತಿಯ ಮೂಲಕ ಪಡೆಯಬಹುದೆಂದು ಭಾವಿಸಲಾಗಿದ್ದಿತು. ಆದರೆ ವಿವೇಕಾನಂದರು ಪ್ರಸ್ತುತ ಸಂದರ್ಭದಲ್ಲಿ ನಿಸ್ವಾರ್ಥಸೇವೆಯ ಕರ್ಮಯೋಗವು ತಾತ್ತ್ವಿಕ ಮುಕ್ತಿಯನ್ನು ನೀಡುತ್ತದೆಂದು ಭಾವಿಸಿ, ಅದಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಿದರು. ಜೊತೆಗೆ ವ್ಯಕ್ತಿಯು ತಾನು ಮುಕ್ತಿ ಹೊಂದುವುದು ಮುಖ್ಯವಾಗಿರದೆ, ಜೀವಿಗಳೆಲ್ಲರನ್ನೂ ದೈವಾಂಶಸಂಭೂತರೆಂದು ಭಾವಿಸಿ ಸೇವೆಗೈಯುವುದು ಮುಖ್ಯವೆಂಬ ಮಾನವೀಯತೆಯ ಹೊಸ ದೃಷ್ಟಿಕೋನವನ್ನು ಅವರು ಪ್ರಚುರಪಡಿಸಿದರು. ಹೀಗೆ ವೇದಾಂತದ ತತ್ತ್ವಗಳನ್ನು ಮೋಕ್ಷಸಾಧನೆಗೆ ಸಹಾಯಕ ಕರಣಗಳೆಂದು ಭಾವಿಸದೇ, ಅವನ್ನು ನಿಜಜೀವನದಲ್ಲಿ ಅಳವಡಿಸಿಕೊಂಡು, ಅವುಗಳ ಅನುಷ್ಠಾನದಿಂದ ದಿನನಿತ್ಯದ ಸಮಸ್ಯೆಗಳನ್ನೂ ಪರಿಹರಿಸಿಕೊಳ್ಳಬಹುದೆಂಬ ಸತ್ಯವನ್ನು ಸ್ವಾಮೀಜಿ ಪ್ರತಿಬಿಂಬಿಸಿದರು. ಸಮಾಜಕಲ್ಯಾಣದ ಮುಂದೆ ಆತ್ಮಕಲ್ಯಾಣ ಮುಖ್ಯವಲ್ಲವೆಂದೂ ಸಾರಿದರು.

ಸಂನ್ಯಾಸಧರ್ಮದ ಮಹತ್ವವನ್ನು ತಿಳಿಸುವುದರ ಜೊತೆಗೆ ಅದಕ್ಕೊಂದು ಹೊಸ ರೂಪ ಕೊಟ್ಟು ಆಧುನಿಕ ಸಮಾಜದಲ್ಲಿ ಅದರ ಅನನ್ಯತೆಯ ಪ್ರಾಶಸ್ತ್ಯವನ್ನು ತಿಳಿಸಲೆಂದೇ ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಠವನ್ನು ಸ್ಥಾಪಿಸಿದುದು ಎಂದು ಹೇಳಬಹುದು. ಸಾಮಾಜಿಕ ಸುಭದ್ರತೆ ಮತ್ತು ಸಾಮೂಹಿಕ ಏಳಿಗೆಗೆ ಸಂನ್ಯಾಸಿಗಳ ನಿಸ್ವಾರ್ಥಸೇವೆಯ ಅನಿವಾರ್ಯತೆಯನ್ನು ಸ್ವಾಮೀಜಿ ವಿವರಿಸಿದರು. ಹೀಗೆ 'ಶಿವಜ್ಞಾನೇ ಜೀವಸೇವಾ' ಎಂಬ ರಾಮಕೃಷ್ಣ ಪರಮಹಂಸರ ಮಾತಿನಂತೆ, ಸಂನ್ಯಾಸಧರ್ಮದ ಪ್ರಕಾರ ಸಮಾಜಸೇವೆಯೇ ದೈವಾರಾಧನೆ ಎಂದು ಇವರು ಪ್ರತಿಪಾದಿಸಿದ ಕರ್ಮಯೋಗವು ಭಕ್ತಿಯೋಗದ ವಿಸ್ತೃತರೂಪವಾಗಿ ಪರಿಣಮಿಸಿತು. ಹೀಗೆ ವಿವೇಕಾನಂದರ ದೃಷ್ಟಿಯಲ್ಲಿ ಕಟ್ಟುನಿಟ್ಟಾದ ಸಾಂಪ್ರದಾಯಿಕ ಸಂನ್ಯಾಸಧರ್ಮದಲ್ಲಿನ 'ವೈರಾಗ್ಯ'ವೆಂಬ ಬಾಹ್ಯಾಚರಣೆಯು ಶಿಸ್ತು, ಸಂಯಮ ಮತ್ತು ಸೇವಾಕಾರ್ಯದ ಹೆಸರಿನಲ್ಲಿ ಆಧುನೀಕರಣಗೊಂಡಿತು. ಪರರ ಸೇವೆಗಾಗಿ ಸರ್ವಸ್ವವನ್ನೂ ತ್ಯಜಿಸುವವನು ಮಾತ್ರ ಮುಕ್ತಿಗೆ ಅರ್ಹನೆಂಬ ತತ್ತ್ವವನ್ನು ಸ್ವಾಮೀಜಿ ಈ ಮೂಲಕ ಸ್ಪಷ್ಟಪಡಿಸಿದರು.

ತಮಸ್ಸಿನಲ್ಲಿ ಮುಳುಗಿರುವವರನ್ನು ಎಬ್ಬಿಸಿ ಅವರ ಕಾಲಮೇಲೆ ಅವರನ್ನು ನಿಲ್ಲುವಂತೆ ಮಾಡುವುದೇ ಇಂದಿನ ಆವಶ್ಯಕತೆ ಎಂದೂ, ಅದೇ 'ಕರ್ಮಯೋಗ'ವೆಂದೂ, ಅದೇ ಜೀವನದ ರಹಸ್ಯವೆಂದೂ ಆದರ್ಶವೆಂದೂ ಸ್ವಾಮೀಜಿ ಸಾರಿದರು. ವ್ಯಕ್ತಿಯೊಬ್ಬನು ಭಗವಂತನ ಸರ್ವಾಂತರ್ಯಾಮಿತ್ವವನ್ನು ಅರಿತಾಗ ಆತ ಎಲ್ಲೆಡೆಯೂ, ಎಲ್ಲರಲ್ಲೂ ದೈವವನ್ನು ಕಾಣುವುದರ ಜೊತೆಗೆ ಎಲ್ಲರೊಂದಿಗೂ ಪ್ರೀತಿ, ವಿಶ್ವಾಸ, ಸ್ನೇಹಮನೋಭಾವವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದಲೇ ಅವರು **'ದರಿದ್ರದೇವೋ ಭವ' 'ಮೂರ್ಖದೇವೋ ಭವ'** ಮತ್ತು **'ಪಾಪಿದೇವೋ ಭವ'** ಎಂಬ ಮಂತ್ರಗಳನ್ನು ಉದ್ಗರಿಸಿ ಬಡಬಗ್ಗರ, ರೋಗಿಗಳ, ದುರ್ಬಲರ, ದುಃಖಿಗಳ, ಪತಿತರ, ಆರ್ತರ, ಅಜ್ಞಾನಿಗಳ ಸೇವೆಯನ್ನು ಪ್ರತಿಪಾದಿಸಿ, ಜಾತಿ–ವರ್ಣ–ವರ್ಗ–ಲಿಂಗ ಭೇದವಿಲ್ಲದೆ ಪ್ರೀತಿ–ವಿಶ್ವಾಸ ಸೇವಾಮನೋಭಾವವನ್ನು ಒತ್ತಿ ಹೇಳಿ, ವಿದ್ಯಾಪ್ರಚಾರ, ಜ್ಞಾನದಾಸೋಹ, ಶುಶ್ರೂಷೆಗಳ ಮೂಲಕ **'ಯತ್ರ ಜೀವ ತತ್ರ ಶಿವ'** (ಎಲ್ಲಿ ಜೀವಿ ಇರುವನೋ, ಅಲ್ಲೆಲ್ಲ ಶಿವ ಇರುವನು) ಎಂಬ ಭಾವನೆಯಲ್ಲಿ ವಿರಾಟ್‌ಪೂಜೆಗೆ ಅನುವಾಗಬೇಕೆಂದು ತಿಳಿಸಿದರು. 'ಬಹುಜನ ಸುಖಕ್ಕಾಗಿ' ಮತ್ತು 'ಬಹುಜನ ಹಿತಕ್ಕಾಗಿ' ಶ್ರಮಿಸಬೇಕೆಂದೂ, ಅದೇ ಈ ಮಹಾಯುಗದ ಧರ್ಮವೆಂದೂ ಸಾರಿದರು. **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬಂತೆ ವ್ಯಕ್ತಿಯೊಬ್ಬನ ಆತ್ಮಕಲ್ಯಾಣ ಮತ್ತು ಸಮಾಜಮುಖಿ ಚಿಂತನೆ ಜೊತೆಜೊತೆಯಾಗಿ ಸಾಗಬೇಕೆಂದು ಪ್ರತಿಪಾದಿಸಿ, 'ಸೇವಾ ಯೋಗ'ವೆಂಬ ಹೊಸತತ್ತ್ವವನ್ನು ವಿವೇಕಾನಂದರು ಸಾರಿದರು. ಇದನ್ನೇ 'Spiritual Humanism' (ಆಧ್ಯಾತ್ಮಿಕ ಮಾನವೀಯತೆ) ಎಂದು ಹೇಳಲಾಗುತ್ತದೆ.

ಮಾನವರ ಹಿತಕ್ಕಾಗಿ ಉಪನಿಷತ್ ತತ್ತ್ವಗಳನ್ನು ಜೀವನದಲ್ಲಿ ಪ್ರತಿಪಾದಿಸಿ, ಬೋಧಿಸಿ, ಸಾಧಿಸಿ, ಜನರ ದೈಹಿಕ, ಮಾನಸಿಕ ಮತ್ತು ಪಾರಮಾರ್ಥಿಕ ಉನ್ನತಿಗೆ ಸಹಾಯಹಸ್ತವನ್ನು ಸ್ವಾಮೀಜಿ ನೀಡಿದರು. ಅದ್ವೈತದಲ್ಲಿನ **'ಮಾಯಾಮಯಮಿದಂ ಸರ್ವಂ'** ಎಂಬ ಮಾತಿಗೆ 'ಮಾಯೆ' ಎಂಬುದನ್ನು 'ಭ್ರಾಂತಿ' ಎಂದು ಅರ್ಥೈಸದೇ, ಅದನ್ನು 'ಸ್ಥಿತಿಸೂಚಕವಾದ ಒಂದು ಹೇಳಿಕೆ' (Statement of Fact) ಎನ್ನುತ್ತಾ, ಇಲ್ಲಿನ ಸಮಸ್ಯೆಗಳಿಗೆ

ಅನುಭವದಿಂದ ಅರ್ಥವನ್ನು ಕಲ್ಪಿಸುವುದೇ ಮಾಯೆಯನ್ನು ಗೆಲ್ಲುವ ಉಪಾಯವೆಂದು ಪ್ರತಿಪಾದಿಸಿದರು. "ಮಾಯಾರಾಜ್ಯದಲ್ಲಿನ ಈ ದೃಶ್ಯಾವಳಿಗಳೇ ಇಷ್ಟು ಸುಂದರವಾಗಿರುವಾಗ ಇದರ ಹಿಂದಿರುವ ನಿತ್ಯಸತ್ಯದ ಸ್ವರೂಪ ಇನ್ನೆಷ್ಟು ಸುಂದರವಾಗಿರಬಹುದು" ಎಂಬ ಹೊಸ ಸಿದ್ಧಾಂತವನ್ನೇ ಹೊರಹೊಮ್ಮಿಸಿದರು. ಭಗವಂತನ ಸೃಷ್ಟಿಯಾದ ಈ ಜಗತ್ತಿನಲ್ಲಿ ಯಾವುದೂ ತುಚ್ಛವಾಗಿರದೆ, ಕೆಡುಕಾಗಿರದೆ, ಜಡ–ಚೇತನಗಳೆರಡೂ ಒಂದೇ ಸತ್ಯದ ಎರಡು ಮುಖಗಳೆಂದು ಭಾವಿಸಿ, ಅವುಗಳ ಸಮಷ್ಟಿ ಆರಾಧನೆಯ ಮೂಲಕ ವಿಶ್ವತೋಮುಖವಾದ ಜ್ಞಾನವನ್ನು ಪಡೆಯಬೇಕೆಂದು ಸ್ವಾಮೀಜಿ ತಿಳಿಸಿಕೊಟ್ಟರು.

ತರುಣರ ದೈಹಿಕ ದೌರ್ಬಲ್ಯವನ್ನೂ ಮಾನಸಿಕ ಕ್ಲೈಬ್ಯವನ್ನೂ ತೀವ್ರವಾಗಿ ಖಂಡಿಸಿದ ಸ್ವಾಮೀಜಿ, ಅವರು ತಮ್ಮ ಸಮಸ್ಯೆಗಳಿಗೆ ಧೈರ್ಯ, ಶ್ರದ್ಧೆಗಳಿಂದ ಪರಿಹಾರ ಕಂಡುಕೊಳ್ಳಬೇಕೆಂದೂ, ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಬೇಕೆಂದೂ, ಬೇರಾವುದೇ ಶಕ್ತಿಯು ಅವರನ್ನು ನಡೆಸಲಾರದೆಂದೂ ಹೇಳಿದರು. ಆ ಮೂಲಕ 'ನಿಮಗೆ ನೀವೇ ಶಿಲ್ಪಿ' ಗಳೆಂಬ ಆದರ್ಶಾತ್ಮಕ ಆತ್ಮವಿಶ್ವಾಸದ ಸಂದೇಶವನ್ನು ಬಿತ್ತಿದರು. ಆತ್ಮವಿಶ್ವಾಸವೇ ಧೀರನ ಮೂಲಧನವಾದ್ದರಿಂದ, **'ಉತ್ತಿಷ್ಠತ, ಜಾಗೃತ, ಪ್ರಾಪ್ಯ ವರಾನ್ ನಿಬೋಧತ'** ಎನ್ನುತ್ತಾ, ಅವರಲ್ಲಿ ಕ್ಷಾತ್ರವೀರ್ಯದ ಮತ್ತು ಬ್ರಹ್ಮತೇಜಸ್ಸಿನ ಅಗತ್ಯತೆಯನ್ನು ತಿಳಿಯಪಡಿಸಿದರು. ಹಾಗಾಗಿ ನಮಗೀಗ ಬೇಕಾಗಿರುವುದು 'ಕಬ್ಬಿಣದ ಮಾಂಸಖಂಡಗಳು ಮತ್ತು ಉಕ್ಕಿನ ನರಗಳು' ಎನ್ನುತ್ತಾ, ಬಲಿಷ್ಠ, ದೃಢಕಾಯ, ಮೇಧಾವಿ ಆದರ್ಶ ಯುವಕರ ಅಗತ್ಯತೆಯನ್ನು ಸಾರಿ, ತನ್ಮೂಲಕ ಪ್ರಪಂಚವನ್ನೇ ಬದಲಾಯಿಸಬಹುದೆಂಬ ನಂಬಿಕೆಯನ್ನು ಹೊಂದಿದ್ದರು.

ಭಾರತೀಯ ತತ್ತ್ವಸಿದ್ಧಾಂತಗಳನ್ನೂ, ವೇದಾಂತ ಮತ್ತು ಯೋಗದ ವ್ಯಾಖ್ಯೆಗಳನ್ನೂ ಸಮೀಕರಣಗೊಳಿಸಿ, ಜಗತ್ತಿಗೆ ಹೊಸ ಶೈಲಿಯ 'Practical Vedanta' ಎಂಬ ಹೆಸರಿನ ಹೊಸ ದೃಷ್ಟಿಕೋನವನ್ನು ಸ್ವಾಮೀಜಿ ನಿರೂಪಿಸಿದರು. ಭಾರತದ ಸಾಂಸ್ಕೃತಿಕ ರಾಯಭಾರಿಯಾದ ಅವರ ಈ ಹೊಸ ವ್ಯಾಖ್ಯಾನವು ಎಲ್ಲರಿಗೂ ಒಪ್ಪಿಗೆಯಾಗುವಂತಿದ್ದು, ಅದರ ಸಂದೇಶಗಳೆಲ್ಲವನ್ನೂ ನಮ್ಮ ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳಬಹುದೆಂಬುದನ್ನು ಸ್ವಾಮೀಜಿ ತೋರಿಸಿಕೊಟ್ಟರು. ಅವರ ಈ ಯುಗದ ಧರ್ಮವಾಣಿಯು ಕಾಲದೇಶಜನ್ಯವಾದ ಸಂಕುಚಿತತೆಯ ದೃಷ್ಟಿಯಿಂದ ದೂರವಾಗಿ ವಿಚಾರಪೂರ್ಣವಾದುದೂ, ಅನುಷ್ಠಾನಸಾಧ್ಯವಾದುದೂ ಆಗಿರುತ್ತದೆ. ಅವರ ಈ ಶಕ್ತಿಶಾಲಿವಾಣಿಯ ಜ್ಯೋತಿಯ ಖನಿಯಲ್ಲಿ ನಾವು ಮಿಂದರೆ ಪ್ರಬುದ್ಧರಾಗುವುದರಲ್ಲಿ ಸಂಶಯವಿಲ್ಲ. "ಸ್ವಾಮೀಜಿಯವರ ಈ ನುಡಿಗಳಿಂದ ನಮ್ಮ ದೇಶದ ಜನ ಹಿಂದೆಂದೂ ಕಾಣದ ಆತ್ಮಗೌರವವನ್ನೂ, ಆತ್ಮವಿಶ್ವಾಸವನ್ನೂ, ಆತ್ಮಬಲವನ್ನೂ ಪಡೆದಿದ್ದಾರೆ" ಎಂಬ ಸುಭಾಷ್‌ಚಂದ್ರ ಬೋಸರ ನುಡಿ ಸಮರ್ಪಕವಾದುದು.

ಉಪದೇಶ ಮುಖ್ಯವಲ್ಲ ಅನುಷ್ಠಾನ ಮುಖ್ಯವೆಂದು ಸಾರುತ್ತಾ, ಜೀವನದಲ್ಲಿ ಗುರಿ ಇರಲಿ, ಗುರಿಯತ್ತ ಗಮನವಿರಲಿ, ಗಮನದತ್ತ ಪ್ರಯತ್ನವಿರಲಿ ಎಂಬ ವಿವೇಕಾನಂದರ ಸಮಾಜಮುಖಿ ಸಂದೇಶವು ಸರ್ವಕಾಲಕ್ಕೂ ಪ್ರಸ್ತುತವಾದುದು.

## ಸ್ವಾಮಿ ವಿವೇಕಾನಂದರ ಸ್ಫೂರ್ತಿ ಮತ್ತು ಪ್ರಭಾವ – ಅನುಭವ ಕಥನ

### ಶ್ರೀರಾಮಕೃಷ್ಣ ವಚನವೇದ ಓದುವುದಕ್ಕೆ ಪ್ರಭಾವ ಬೀರಿದರು !

**ಮೊದಲಿಗೆ ಸ್ವಾಮಿ ವಿವೇಕಾನಂದರ ಚರಣಕಮಲಗಳಿಗೆ ವಂದಿಸುತ್ತಾ ನನ್ನ ಈ ಬರಹವನ್ನು ಪ್ರಾರಂಭಿಸುತ್ತಿದ್ದೇನೆ. ಮೊಟ್ಟಮೊದಲಿಗೆ 'ಜ್ಞಾನಯೋಗ' ಗ್ರಂಥದ ಅಧ್ಯಯನದ ಮೂಲಕ ಸ್ವಾಮೀಜಿಯವರಿಂದ ನಾನು ಪ್ರಭಾವಿತನಾದೆ. 'ಜ್ಞಾನಯೋಗ' ಗ್ರಂಥ ನಿಜಕ್ಕೂ ಜ್ಞಾನಗಂಗೆಯೇ ಸರಿ. ಗ್ರಂಥದಲ್ಲಿ ನನಗೆ ಹಿಡಿಸಿದ ಮಾತು ಹೀಗಿದೆ: "ಮಾನವನ ಇಂದಿನ ಸ್ಥಿತಿ ಹಿಂದಿನ ಸ್ಥಿತಿಗಿಂತ ಅಧೋಗತಿಗೆ ಬಂದ ಸ್ಥಿತಿ." ಈ ಗ್ರಂಥ ನನ್ನ ಆಧ್ಯಾತ್ಮಿಕ ಜೀವನಕ್ಕೆ ಪುಷ್ಟಿದಾಯಕವಾಯಿತು; ಆಧ್ಯಾತ್ಮಿಕ ರಂಗಕ್ಕೆ ಪ್ರವೇಶಿಸಲು ನನಗೆ ಸ್ಫೂರ್ತಿ ನೀಡಿತು. ನನ್ನ ಲೌಕಿಕ ಪ್ರಪಂಚದಲ್ಲಿ ನಾನು ಎದುರಿಸಬೇಕಾಗಿ ಬಂದ ಹಲವಾರು ಸಮಸ್ಯೆಗಳನ್ನು ಎದುರಿಸಲು, ಹತ್ತಾರು ಬಾರಿ ಈ ಗ್ರಂಥವನ್ನು ಅಧ್ಯಯನ ಮಾಡಿ ಧೈರ್ಯ ಹಾಗೂ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡೆ. ಸ್ಫೂರ್ತಿದಾಯಕವಾಗಿರುವ ಸ್ವಾಮೀಜಿಯವರ ಲೇಖನಗಳು ನನ್ನ ಜೀವನದ ಆಗುಹೋಗುಗಳಲ್ಲಿ ನನಗೆ ಸಹಾಯಕವಾಗಿವೆ. ಸ್ವಾಮೀಜಿ ಭರತಖಂಡವಿರುವವರೆಗೂ ಸ್ಫೂರ್ತಿದಾಯಕರಾಗಿಯೇ ಉಳಿಯುತ್ತಾರೆ.**

**ಇದಲ್ಲದೆ 'ರಾಮಕೃಷ್ಣ ವಚನವೇದ'ದ ಅಧ್ಯಯನದಿಂದ ನನಗೆ ಆಧ್ಯಾತ್ಮಿಕ ಒಲವು ಉಂಟಾಯಿತು. ವಚನವೇದ ಓದುವುದಕ್ಕೆ ನನಗೆ ಪ್ರಭಾವ ಬೀರಿದವರೂ ವಿವೇಕಾನಂದರೇ. ಏಕೆಂದರೆ ಬಾಲಕ ನರೇಂದ್ರ ಪರಮಹಂಸರನ್ನು, "ನೀವು ದೇವರನ್ನು ಕಂಡಿದ್ದೀರಾ?" ಎಂದು ಕೇಳಿದ ಪ್ರಶ್ನೆ, ನಾನು ಸಹ ದೇವರನ್ನು ಅರಸಿ ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಮನೋಭಾವ ನನ್ನಲ್ಲಿ ಮೂಡಲು ಕಾರಣವಾಯಿತು. ಒಮ್ಮೆ ಪ್ರಯಾಣದ ವೇಳೆ ಸ್ವಾಮೀಜಿಯವರು ಧರಿಸಿದ ಕಾವಿ ಬಟ್ಟೆಯನ್ನು ನೋಡಿ ಬ್ರಿಟಿಷ್ ಜನ ಆಡಿಕೊಳ್ಳುತ್ತಾರೆ. ಆಗ ಸ್ವಾಮೀಜಿ, "ನಿಮ್ಮಂಥ ಎಷ್ಟೋ ಮೂರ್ಖರನ್ನು ನನ್ನ ಪ್ರಯಾಣದ ಸಮಯದಲ್ಲಿ ಕಂಡಿದ್ದೇನೆ" ಎನ್ನುತ್ತಾರೆ. ಈ ಮಾತುಗಳಲ್ಲಿ ಕಂಡುಬರುವ ಧೈರ್ಯ ಹಾಗೂ ಎದೆಗಾರಿಕೆ – ಅವುಗಳನ್ನು ನಾನೂ ಸಹ ರೂಢಿಸಿಕೊಳ್ಳುವಂತೆ ಮಾಡಿತು. ಸ್ವಾಮೀಜಿಯವರು ಧ್ಯಾನದಲ್ಲಿ ತೋರುತ್ತಿದ್ದ ಏಕಾಗ್ರತೆ, ಅವರ ಶಿಸ್ತು, ನನ್ನ ಮೇಲೆ ಪ್ರಭಾವ ಬೀರಿ ನಾನೂ ಸಹ ಅದೇ ರೀತಿ ನಡೆದುಕೊಳ್ಳುವುದಕ್ಕೆ ಪ್ರೇರಣೆ ನೀಡಿತು. ಸ್ವಾಮೀಜಿಯವರ ಜೀವನವು ನನ್ನ ಜೀವನದಲ್ಲಿಯೂ ಅವರ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ನನಗೆ ಸ್ಫೂರ್ತಿಯಾಗಿದೆ. ನಾನಿಂದು ಧ್ಯಾನಾಸಕ್ತನಾಗಿದ್ದೇನೆ. ಸ್ವಾಮೀಜಿ ಯಂತೆ ಶಿಸ್ತಿನಿಂದ ಆಧ್ಯಾತ್ಮಿಕ ಹಾಗೂ ಲೌಕಿಕ – ಎರಡನ್ನು ಸರಿದೂಗಿಸಿಕೊಂಡು ಹೋಗುವುದಕ್ಕೆ ಪ್ರಯತ್ನಮಾಡುತ್ತಿದ್ದೇನೆ. ಅವರ ವಾಕ್ಯವಾದ "ಏಳಿ, ಎದ್ದೇಳಿ, ಜಾಗೃತರಾಗಿ" ಎನ್ನುವ ಘೋಷಣೆ ನನ್ನ ಅಂತರಂಗವನ್ನು ಜಾಗೃತಗೊಳಿಸಿ ಬಡಿದೆಬ್ಬಿಸಿದೆ.**

**– ಸತ್ಯನಾರಾಯಣ. ಆರ್., ತಿಪಟೂರು**



**ಪ್ರ**ಪಂಚದಲ್ಲಿ ಲಭ್ಯವಿರುವ ವೈವಿಧ್ಯಮಯ ಧರ್ಮ ಗ್ರಂಥಗಳನ್ನು ಗಮನಿಸಿದರೆ ಅವು ಮನುಷ್ಯ ದಿನನಿತ್ಯದಲ್ಲಿ ಪಾಲಿಸ ಬೇಕಾದ ಧರ್ಮದ ಜೊತೆಗೆ, ಕಣ್ಣಿಗೆ ಕಾಣುವ ಈ ಪ್ರಪಂಚದ ಉಗಮದ ಬಗ್ಗೆ ತಮ್ಮದೇ ಆದ ವಿವರಣೆ ಕೊಡುತ್ತವೆ. ಚರ್ಚಿನ ಧರ್ಮ ವಂತೂ ತಾನು ಪ್ರತಿಪಾದಿಸುವ ಉಗಮಸಿದ್ಧಾಂತವನ್ನು ಪ್ರಶ್ನಿಸುವ ಕೆಲವರನ್ನು ಸಜೀವವಾಗಿ ದಹನ ಮಾಡಿದ್ದೂ ಉಂಟು. ಆದರೆ ವಿಜ್ಞಾನವು ಮನುಷ್ಯನ ದಿನನಿತ್ಯದ ಬದುಕನ್ನು ಕುರಿತು ಮಾತನಾಡುವುದಿಲ್ಲ. ಅದು ಕಣ್ಣಿಗೆ ಕಾಣುವ ಈ ಪ್ರಪಂಚದ ವಿದ್ಯಮಾನಗಳನ್ನು ತರ್ಕಾಧಾರಿತವಾಗಿ, ಕಾರ್ಯಕಾರಣ ಸಂಬಂಧಗಳಿಗನುಗುಣವಾಗಿ ವಿವರಿಸುವ ಪ್ರಯತ್ನ ಮಾಡುತ್ತದೆ. ತನ್ನ ಅರಿವಿನ ಅಳತೆಗೆ ಮೀರಿದ್ದನ್ನು ವಿನಮ್ರವಾಗಿ 'ತಿಳಿದಿಲ್ಲ' ಎಂದು ಒಪ್ಪಿಕೊಂಡು, 'ಮುಂದೆ ಎಂದಾದರೂ ಇದನ್ನು ತಿಳಿದೇ ತಿಳಿಯುತ್ತೇನೆ' ಎಂಬ ದೃಢಸಂಕಲ್ಪ ಮಾಡುತ್ತದೆ.

ಧರ್ಮಗಳ ಪ್ರತಿಪಾದಕರು ತಮ್ಮ ಮೌಢ್ಯವನ್ನು ಆಧ್ಯಾತ್ಮೀಕರಿಸುವ ಬದಲು 'ಗೊತ್ತಿಲ್ಲ', 'ಗೊತ್ತಿರುವುದು ಇಷ್ಟೆ' ಎಂದಿದ್ದರೆ ಧರ್ಮಸಂಬಂಧವಾದ ಮೂಢನಂಬಿಕೆಗಳು ಬಹುಶಃ ಕಡಮೆಯಾಗುತ್ತಿದ್ದವು. ವಿಜ್ಞಾನಿಗಳು ತಾವು ಕಂಡುಹಿಡಿಯುವ ವೈಜ್ಞಾನಿಕ ಸತ್ಯ ಗಳಿಗಿಂತಲೂ ಬದುಕು ಮುಖ್ಯ ಎಂದು ಪರಿಗಣಿಸಿದ್ದರೆ ಈ ಜಗತ್ತಿನಲ್ಲಿರುವ ಹಿಂಸೆಯ ಪ್ರಮಾಣ ಕಡಮೆಯಾಗುತ್ತಿತ್ತು. ಈ ಕಾರಣದಿಂದಲೇ 'ಧರ್ಮವಿಲ್ಲದ ವಿಜ್ಞಾನ ಕುಂಟು, ವಿಜ್ಞಾನವಿಲ್ಲದ ಧರ್ಮ ಕುರುಡು' ಎಂದು ಐನ್‌ಸ್ಟೈನ್ ಹೇಳಿರಬೇಕು.

ತೀಕ್ಷ್ಣವಾದ ವೈಜ್ಞಾನಿಕ ಮನಸ್ಸಿನ ಮೂಲಕ ಅಧ್ಯಾತ್ಮವನ್ನು ಸಾಕ್ಷಾತ್ಕರಿಸಿಕೊಂಡರೆ, ಧರ್ಮಗ್ರಂಥಗಳನ್ನು ವಿಶ್ಲೇಷಿಸಿದರೆ ಅದರ ಪರಿಣಾಮ ಏನಾದೀತು? ಬಹುಶಃ ಸ್ವಾಮಿ ವಿವೇಕಾನಂದರು ಈ ಗುಂಪಿಗೆ ಸೇರಬಹುದಾದ ಅತ್ಯುತ್ತಮ ಉದಾಹರಣೆ. ವೈಜ್ಞಾನಿಕ ಮನಸ್ಸಿನ ಜೊತೆಗೆ ಅವರಿಗೆ ಅಸಾಧಾರಣ ಮಾನಸಿಕ ಶಕ್ತಿಗಳೂ ಇದ್ದವು. ಅವರ ನೆನಪಿನ ಶಕ್ತಿ, ಚರಿತ್ರೆ–ವಿಜ್ಞಾನ–ಧರ್ಮಗ್ರಂಥಗಳ ಬಗ್ಗೆ ಅವರಿಗಿದ್ದ ಅಸಾಧಾರಣ ಪಾಂಡಿತ್ಯದಿಂದಾಗಿ ಅವರು ಯಾವುದೇ ವಿಷಯದ ಕುರಿತಾಗಿ ಸತ್ಯಕ್ಕೆ ಅತ್ಯಂತ ಸಮೀಪವಾದ ವಾದವನ್ನು ಮಂಡಿಸಬಲ್ಲವರಾಗಿದ್ದರು. ಈ ಹಿನ್ನೆಲೆಯಲ್ಲಿ ವಿವಿಧ ವಾದಗಳ ಕುರಿತು ಸ್ವಾಮಿ ವಿವೇಕಾನಂದರ ವಿಮರ್ಶೆ ಸ್ವಾರಸ್ಯವಾಗಿದೆ.

ಸ್ವಾಮೀಜಿಯವರ ಪ್ರಕಾರ ಅತ್ಯಂತ ಪರಿಪೂರ್ಣವಾದ, ಸತ್ಯಕ್ಕೆ ಅತ್ಯಂತ ಸಮೀಪವಾದ **'ವಾದ'** ಎಂದರೆ ವೇದಾಂತ. ವಿದೇಶಗಳಲ್ಲಿ ಭಾಷಣ ಮಾಡುವಾಗ ಅವರು ಹೇಳುತ್ತಾರೆ : "ಭಾರತದ ಅತ್ಯಂತ ಪುರಾತನ ತತ್ತ್ವಶಾಸ್ತ್ರವಾದ ವೇದಾಂತ ಶಾಸ್ತ್ರವನ್ನು ಪ್ರತಿನಿಧಿಸಲು ನಾನು ಇಲ್ಲಿಗೆ ಬಂದಿದ್ದೇನೆ." ವೇದಾಂತದ ಏಕತಾತತ್ತ್ವವನ್ನು ಸ್ವಾಮೀಜಿ ಎಲ್ಲಾ ಸಂದರ್ಭಗಳಲ್ಲೂ ಎತ್ತಿಹಿಡಿಯುತ್ತಾರೆ. ಏಕೆಂದರೆ ನಿಜವಾದ ಸ್ವಾತಂತ್ರ್ಯ ಇರುವುದು ಈ ಏಕತೆಯಲ್ಲಿ. 'ಅನೇಕ' ದಲ್ಲಿ ಪರಸ್ಪರಾವಲಂಬನೆ ಇರುವುದರಿಂದ ನಿರಪೇಕ್ಷ ಸ್ವಾತಂತ್ರ್ಯ ಸಾಧ್ಯವಿಲ್ಲ. ಸುಳ್ಳನ್ನು ಆಧರಿಸಿ ಯಾರೂ ಸ್ವಾತಂತ್ರ್ಯ ಪಡೆಯಲಾರರು. ಈ ಜಗತ್ತಿನ ಎಲ್ಲಾ ಚಲನೆಗಳು ಸ್ವಾತಂತ್ರ್ಯದೆಡೆಗೆ ಚಲಿಸುವ ಪ್ರಯತ್ನಗಳು. ಹಾಗಾಗಿ ಯಾವುದೇ ವಾದವು ಈ ಏಕತಾತತ್ತ್ವಕ್ಕೆ ಎಷ್ಟು ಸಮೀಪವಿರುತ್ತದೋ ಅಷ್ಟರಮಟ್ಟಿಗೆ ಸತ್ಯಕ್ಕೆ ಸಮೀಪವಾಗಿರುತ್ತದೆ. ಯಾವುದೇ ವಾದದ ವಿಮರ್ಶೆಯ ಒರೆಗಲ್ಲು ಸ್ವಾಮೀಜಿಯವರ ಪ್ರಕಾರ ಈ ಏಕತಾತತ್ತ್ವವೇ ಆಗಿದೆ. ಯಾವ ವಾದವು ಈ ಏಕತಾತತ್ತ್ವಕ್ಕೆ

# ವಿವಿಧ ವಾದಗಳ ಕುರಿತು

# ಸ್ವಾಮಿ ವಿವೇಕಾನಂದರು

◆ ಜಿ. ಎಸ್. ಜಯದೇವ



**ಸ್ವಾಮಿ ವಿವೇಕಾನಂದರು ಕೇವಲ ಒಬ್ಬ ಆಧ್ಯಾತ್ಮಿಕ ಚೇತನವಷ್ಟೇ ಅಲ್ಲ, ಬಹಳ ಉತ್ತಮ ದರ್ಜೆಯ ದಾರ್ಶನಿಕರೆಂದೂ ಪ್ರಖ್ಯಾತಿ ಪಡೆದಿದ್ದಾರೆ. ಪ್ರಾಚೀನ ಹಾಗೂ ಅರ್ವಾಚೀನ ತಾತ್ತ್ವಿಕ ನಿಲುವುಗಳ ಬಗ್ಗೆ ಸ್ವಾಮೀಜಿಯವರ ಅಭಿಪ್ರಾಯಗಳನ್ನು ಅರಿಯುವುದು ಒಂದು ಚೇತೋಹಾರಿ ಅನುಭವ. ಸ್ವಾಮೀಜಿಯವರ ಹತ್ತಾರು ಪ್ರವಚನಗಳಲ್ಲಿರುವ ಈ ಅಂಶಗಳನ್ನು ಕಲೆಹಾಕಿ, ಸಂಗ್ರಹಿಸಿ, ವಿಶ್ಲೇಷಣಾತ್ಮಕವಾಗಿ ನಮಗೆ ಇತ್ತಿರುವ ಲೇಖಕರು ವಿದ್ವಾಂಸರಷ್ಟೇ ಅಲ್ಲ, ಜೀವನಪೂರ್ತಿ ಬಡಮಕ್ಕಳ ಸೇವೆಗಾಗಿ ತಮ್ಮನ್ನು ಸಮರ್ಪಿಸಿಕೊಂಡಿರುವ ವ್ರತಧಾರಿಗಳು. ಇವರು ಚಾಮರಾಜನಗರದಲ್ಲಿ 'ದೀನಬಂಧು' ಎಂಬ ಮಕ್ಕಳ ಮನೆಯನ್ನು ಮತ್ತು ಶಾಲೆಯನ್ನು ನಡೆಸುತ್ತಿದ್ದಾರೆ. ಅಲ್ಲದೆ, ಮೈಸೂರಿನಲ್ಲಿ ಅಬಲ ಸ್ತ್ರೀಯರಿಗೆ ಒಂದು ವಸತಿಗೃಹವೂ ಇವರ ಸಂಚಾಲಕತ್ವದಲ್ಲಿ ನಡೆಯುತ್ತಿದೆ.**

ಸಮೀಪವಿರುತ್ತದೋ ಅಷ್ಟರಮಟ್ಟಿಗೆ ಅದು ಮನ್ನಣೆಗೆ ಅರ್ಹ. ಅಮೀಬಾದಿಂದ ಹಿಡಿದು ಮನುಷ್ಯನವರೆಗೆ ಏಕಾತ್ಮಕತೆಯನ್ನು ಸಾರುವ ವೇದಾಂತವು ಸ್ವಾಮೀಜಿಯವರ ಪ್ರಕಾರ ಇತರ ವಾದಗಳನ್ನು ತಿರಸ್ಕರಿಸುವುದಿಲ್ಲ; ಬದಲಾಗಿ ಅವುಗಳನ್ನೂ ಒಳಗೊಳ್ಳುತ್ತವೆ. ಎಂದರೆ ಯಾವುದೇ ವಾದವು ತನ್ನ ಆರೋಗ್ಯಕರ ಲಕ್ಷಣಗಳನ್ನು ಉಳಿಸಿಕೊಂಡು ಬೆಳೆದರೆ ಅದು ವೇದಾಂತದಲ್ಲಿಯೇ ಕೊನೆಗೊಳ್ಳುತ್ತದೆ.

### ಭಕ್ತಿಯನ್ನು ಕುರಿತು ಸ್ವಾಮೀಜಿ

ಭಕ್ತಿಯನ್ನು ಕುರಿತು ಮಾತನಾಡುವಾಗಲೂ ಸ್ವಾಮೀಜಿಯವರು ಈ ಏಕಾತ್ಮಕತೆಯ ಅಂಶವನ್ನೇ ಕೇಂದ್ರದಲ್ಲಿಟ್ಟುಕೊಂಡೇ ಮಾತನಾಡುತ್ತಾರೆ. ಎಲ್ಲಾ ಬಗೆಯ ಪ್ರೀತಿಗಳು ಏಕಾತ್ಮಕತೆಯನ್ನೇ ಸಾರುತ್ತವೆ. ಯಾಜ್ಞವಲ್ಕ್ಯರು ಹೇಳುವಂತೆ ಪತಿ ಪತ್ನಿಯರು ತಮ್ಮನ್ನೇ ಪರಸ್ಪರ ಮತ್ತೊಬ್ಬರಲ್ಲಿ ಕಾಣುವುದರಿಂದ ಪ್ರೀತಿಸುತ್ತಾರೆ. ತಾಯಿ ತನ್ನ ಮಗುವನ್ನು ಪ್ರೀತಿಸುವಾಗ ಮಗುವಿನಲ್ಲಿ ತನ್ನನ್ನೇ ಕಾಣುತ್ತಾಳೆ. ಆದ್ದರಿಂದಲೇ ತನ್ನ ಮಗುವನ್ನು ಪ್ರೀತಿಸುತ್ತಾಳೆ. ಮಗುವಿಗಾಗಿ ಸಿಂಹವನ್ನು ಎದುರಿಸಿ ನಿಲ್ಲುವ ತಾಯಿಯ ಧೈರ್ಯದ ಮೂಲವನ್ನು ಸ್ವಾಮೀಜಿಯವರು ಈ ಏಕಾತ್ಮಕತೆಯಲ್ಲಿ ಗುರುತಿಸುತ್ತಾರೆ. ಭಕ್ತಿಶಾಸ್ತ್ರಗಳಲ್ಲೂ ಸ್ಪಷ್ಟವಾಗಿ ತಿಳಿಸಿರುವ ಈ ಏಕಾತ್ಮಕತೆಯ ಅಂಶವನ್ನು ಸ್ವಾಮೀಜಿ ಸ್ಪಷ್ಟವಾಗಿ ವಿಶ್ಲೇಷಿಸುತ್ತ, ಮಕ್ಕಳಾಟಿಕೆಯಂತಹ ಪೂಜಾ ವಿಧಿವಿಧಾನಗಳನ್ನು ಆ ಪ್ರಯಾಣದ ಮೊದಲ ಹಂತಗಳು ಎಂದು ಗುರುತಿಸುತ್ತಾರೆ. ಈ ವಿಶಾಲದೃಷ್ಟಿ ಅವರಿಗೆ ಶ್ರೀರಾಮಕೃಷ್ಣರ ಸಾನ್ನಿಧ್ಯದಿಂದ ಉಂಟಾಗಿರುವುದು ಚಾರಿತ್ರಿಕ ಸತ್ಯ.

### ಬೌದ್ಧಧರ್ಮವನ್ನು ಕುರಿತು ಸ್ವಾಮೀಜಿ

ಬೌದ್ಧಧರ್ಮವನ್ನು ಕುರಿತು ಮಾತನಾಡುವಾಗ ಸ್ವಾಮೀಜಿ ಹೀಗೆ ಹೇಳುತ್ತಾರೆ: ಬುದ್ಧ ಜಾತಿ ಭೇದಗಳಿಲ್ಲದೆ ವೇದಗಳ ಸಾರವನ್ನು ಎಲ್ಲರಿಗೂ ಬೋಧಿಸಿದ. ಏಕೆಂದರೆ ಬುದ್ಧ ಮನುಷ್ಯರೆಲ್ಲರ ಸಮಾನತೆಯನ್ನು ಸ್ಪಷ್ಟವಾಗಿ ಕಾಣುತ್ತಿದ್ದ. ಕರ್ತೃ ಇಲ್ಲದ ಕರ್ತೃತ್ವವನ್ನು ಪ್ರತಿಪಾದಿಸುವ ಬೌದ್ಧಧರ್ಮವನ್ನು ಸ್ವಾಮೀಜಿ ತಮ್ಮದೇ ಆದ ತರ್ಕದಿಂದ ಪ್ರಶ್ನಿಸುತ್ತಾರೆ. "ಬುದ್ಧನ ಧರ್ಮ ಚಾರಿತ್ರಿಕವಾಗಿ ಬಹುಮುಖ್ಯ, ತತ್ತ್ವಶಾಸ್ತ್ರೀಯವಾಗಿ ಅಲ್ಲ" ಎನ್ನುವ ಅವರ ಮಾತಿನಲ್ಲೇ ಬೌದ್ಧಧರ್ಮವನ್ನು ವಿಮರ್ಶಿಸುವ ಧ್ವನಿ ಇದೆ. ಚಾರಿತ್ರಿಕವಾಗಿ ಮೊಟ್ಟಮೊದಲನೆಯವನಾಗಿ ಬುದ್ಧ ಸಮಾನತೆಯನ್ನು ಮೂಡಿಸಲು, ದುಃಖಕ್ಕೆ ಕಾರಣವಾದ ಸ್ವಾರ್ಥವನ್ನು ದಮನ ಮಾಡಲು ಒಂದು ತತ್ತ್ವಶಾಸ್ತ್ರದ ವಾದವನ್ನು ಬೆಳೆಸಿದ. ದುಃಖಕ್ಕೆ ಕಾರಣ ಸ್ವಾರ್ಥ, ಸ್ವಾರ್ಥಕ್ಕೆ ಕಾರಣ 'ನಾನು' ಎಂಬ ಒಂದು ಇದೆ ಎಂಬ ನಂಬಿಕೆ. ಬುದ್ಧ ಈ 'ನಾನು' ಎಂಬುದು ಭ್ರಮೆ ಎಂದು ಹೇಳುತ್ತಾನೆ. ಇಂತಹ 'ನಾನು' ಎಂಬುದು ಯಾವುದೂ ಇಲ್ಲ; ಹಾಗಾಗಿ ದೇವರು ಬೇಕಾಗಿಲ್ಲ; ಆತ್ಮವೂ ಬೇಕಾಗಿಲ್ಲ; ನಶ್ವರವಾದ ಈ ಜಗತ್ತಿನಲ್ಲಿ ಸತ್ಯವನ್ನು ಮುಖಾಮುಖಿ ಎದುರಿಸಿದರೆ ಸಾಕು ಎಂದು ಬೋಧಿಸುತ್ತಾನೆ. ಬೌದ್ಧ ಧರ್ಮದ ಈ ತತ್ತ್ವವನ್ನು ವಿವರಿಸುತ್ತ ಸ್ವಾಮೀಜಿ ಇದೇ ತತ್ತ್ವವನ್ನು ಹಿಂದೂ ಧರ್ಮದ ದೃಷ್ಟಿಯಿಂದ ನೋಡಿದರೆ, ಬುದ್ಧನು ಪ್ರತಿಪಾದಿಸುವ ಈ ಸತ್ಯ ಇನ್ನೂ ಚೆನ್ನಾಗಿ ಅರ್ಥವಾಗುತ್ತದೆ ಎನ್ನುತ್ತಾರೆ. ಉಪನಿಷತ್ತಿನ ಬ್ರಹ್ಮ, ಆತ್ಮಗಳ ದೃಷ್ಟಿಯಿಂದ ಇರುವುದು ಒಂದೇ ಆತ್ಮ, ಅದೇ ಬ್ರಹ್ಮ. ಇರುವುದೆಲ್ಲ ಒಂದೇ ಎಂದಾದ ಮೇಲೆ 'ಅನೇಕ' ಮತ್ತು ಅನೇಕಗಳಿಂದ ಹುಟ್ಟುವ ಸ್ವಾರ್ಥದ ಪ್ರಶ್ನೆಯೇ ಇಲ್ಲ.